# 'ಪಾಜಕದ ಗಿಣಿ'

✍ ಬನ್ನಂಜೆ ಗೋವಿಂದಾಚಾರ್ಯ



ಓ ಪಾಜಕದ ಗಿಣಿಯೇ ಮೂಜಗದ ಕಣ್ಮಣಿಯೇ
ಸೋಜಿಗದ ಗನಿಯೇ ಓ ಮಧ್ವ ಮುನಿಯೇ ॥

ಸವಿದಿರುವೆ ಗುರುವೇ ನೀ ದಿವ್ಯ ತತ್ತ್ವದ ಹಣ್ಣು
ನಮಗೂ ತಿನಿಸಯ್ಯ ಆ ರಸದ ಗಿಣ್ಣು
ಏನು ಪುಣ್ಯ ಮಾಡಿತ್ತೋ ಈ ನೆಲದ ಮಣ್ಣು
ಪಾವನವಾಯಿತು ನಿನ್ನ ಕಂಡ ಕಣ್ಣು ॥

ಆನಂದ ತೀರ್ಥ ಗುರು ನೀನು ಆನಂದಿ
ನಿದ್ದೆಯಿಂದೆಚ್ಚರಿಸೆ ಮದ್ದು ತಂದಿ
ಹರಿಯೇ ಪರದೈವತವು ಎಂದೆನುತ ಬಂದಿ
ನಿನ್ನನರಿತವರಿಲ್ಲ ಬಹಳ ಮಂದಿ

ದೇವಲೋಕದ ಬೆಳಕ ಭುವಿಗಿಳಿಸಿದವನೇ
ಮುಗಿಲ ಭಾಗ್ಯದ ಬಾಗಿಲನ್ನು ತೆರೆದವನೇ
ನೀನೇರಿದೆತ್ತರವ ಕಂಡವರು ಯಾರು ?
ನಮಗೂ ತೋರಯ್ಯ ಆ ಬೆಳಕಿನೂರು.

ಕಡಲಿನಲಿ ಹಡಗನ್ನು ಮುಳುಗಿಸಿದ ಗಾಳಿ
ಕಡಲಿಂದ ಕೃಷ್ಣನನು ತಂದಗಾಳಿ
ಕೈಮುಗಿದು ಬೇಡುವೆನು ಕ್ಷಮೆಯನ್ನು ಕೇಳಿ
ಬೀಜಾಕ್ಷರವ ಬಿತ್ತು ಎದೆಯನ್ನು ಸೀಳಿ
ಎಂದು ಬಂದೀತಯ್ಯಾ ನಿನ್ನ ಸೇವೆಯ ಪಾಳಿ
ತಲೆಯ ಮೇಲಿರಿಸಯ್ಯಾ ನಿನ್ನ ಪದಧೂಳಿ.

ಓ ಪಾಜಕದ ಗಿಣಿಯೇ ಮೂಜಗದ ಕಣ್ಮಣಿಯೇ
ಸೋಜಿಗದ ಗನಿಯೇ ಓ ಮಧ್ವಮುನಿಯೇ ॥